ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 : ದಿನಾಂಕ: 05–4–2015.

# ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾ ಗೋಷ್ಠಿ :<br><br>ಶ್ರೀ ದಿನೇಶ್ ಗುಂಡೂರಾವ್, ಆಹಾರ ನಾಗರೀಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ರಾಜ್ಯ ಸಚಿವರು. | 06–04–2015<br>ಸೋಮವಾರ<br>ಮಧ್ಯಾಹ್ನ<br>12–00 ಗಂಟೆಗೆ | ಸಚಿವರ ಕೊಠಡಿ,<br>ಸಂಃ 243 & 244,<br>2ನೇ ಮಹಡಿ, ವಿಕಾಸಸೌಧ,<br>ಬೆಂಗಳೂರು–560 001. |

ನಿರ್ದೇಶಕರ ಪರವಾಗಿ

ಕರ್ನಾಟಕ ಸರ್ಕಾರ

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

ವಾರ್ತಾ ಸೌಧ, ಸಂಖ್ಯೆ 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001.

ಸಂಖ್ಯೆ : ವಾಸಾಸಂಇ : ಉ ನಿ : ಸುಮಪ : 2015–16 : ದಿನಾಂಕ: 05–4–2015

## ಪತ್ರಿಕಾ ಆಮಂತ್ರಣ

| ಕ್ರಮ ಸಂಖ್ಯೆ | ಕಾರ್ಯಕ್ರಮಗಳ ವಿವರ | ದಿನಾಂಕ ಸಮಯ | ಕಾರ್ಯಕ್ರಮ ನಡೆಯುವ ಸ್ಥಳ |
|---|---|---|---|
| 1. | ಪತ್ರಿಕಾ ಗೋಷ್ಠಿ :<br><br>ಶ್ರೀ ಹೆಚ್. ಆಂಜನೇಯ,<br>ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು. | 06–04–2015<br>ಸೋಮವಾರ<br>ಮಧ್ಯಾಹ್ನ<br>1–00 ಗಂಟೆಗೆ | ಸಮ್ಮೇಳನ ಸಭಾಂಗಣ,<br>ಕೊಠಡಿ ಸಂಃ 334,<br>3ನೇ ಮಹಡಿ,<br>ವಿಧಾನಸೌಧ, ಬೆಂಗಳೂರು. |
| 2. | "ತಿಂಗಳ ಚಿತ್ರ" ಪ್ರದರ್ಶನ.<br>ಉದ್ಘಾಟನೆ:<br>ಶ್ರೀ ಕಾ.ತ. ಚಿಕ್ಕಣ್ಣ,<br>ಸಮನ್ವಯಾಧಿಕಾರಿ,<br>ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನ ಕೇಂದ್ರ.<br><br>ಅಧ್ಯಕ್ಷತೆ:<br>ಡಾ: ಎಂ.ಎಸ್. ಮೂರ್ತಿ,<br>ಅಧ್ಯಕ್ಷರು,<br>ಕರ್ನಾಟಕ ಲಲಿತಕಲಾ ಅಕಾಡೆಮಿ. | 06–04–2015<br>ಸೋಮವಾರ<br>ಸಂಜೆ<br>5–30 ಗಂಟೆಗೆ | ವರ್ಣ ಕಲಾಗ್ಯಾಲರಿ,<br>ಕನ್ನಡ ಭವನ, 2ನೇ ಮಹಡಿ,<br>ಜೆ.ಸಿ.ರಸ್ತೆ, ಬೆಂಗಳೂರು. |

ನಿರ್ದೇಶಕರ ಪರವಾಗಿ

**ಪತ್ರಿಕಾ ಪ್ರಕಟಣೆ**

# ಡಾ: ಬಾಬು ಜಗಜೀವನರಾಂ ನಿರ್ವಹಿಸಿದ ಕೆಲಸಗಳು ಇಂದಿಗೂ ಮಾರ್ಗದರ್ಶನವಾಗಿವೆ

ಬೆಂಗಳೂರು, ಏಪ್ರಿಲ್ 5 (ಕರ್ನಾಟಕ ವಾರ್ತೆ)

ಡಾ: ಬಾಬು ಜಗಜೀವನರಾಂ ಅವರು ಸಚಿವರಾಗಿದ್ದಾಗ ಕಾರ್ಯ ನಿರ್ವಹಿಸಿದ ಕೆಲಸಗಳು ನಮಗೆ ಇಂದಿಗೂ ಮಾರ್ಗದರ್ಶನವಾಗಿವೆ ಎಂದು ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವ ಹೆಚ್.ಆಂಜನೇಯ ಅಭಿಪ್ರಾಯಪಟ್ಟರು.

ಡಾ: ಬಾಬು ಜಗಜೀವನರಾಂ ರವರ 108ನೇ ಜನ್ಮ ದಿನಾಚರಣೆಯ ಅಂಗವಾಗಿ ವಿಧಾನಸೌಧ ಮುಂಭಾಗದಲ್ಲಿರುವ ಡಾ: ಬಾಬು ಜಗಜೀವನರಾಂ ಅವರ ಪ್ರತಿಮೆಗೆ ಇಂದು ಮಾಲಾರ್ಪಣೆ ಮಾಡಿ ಮಾತನಾಡಿದ ಸಚಿವರು, ಹಲವು ಪ್ರಧಾನಿಗಳ ಅವಧಿಯಲ್ಲಿ ಮಂತ್ರಿಯಾಗಿ ಸೇವೆ ಸಲ್ಲಿಸಿರುವ ಅವರು ಚೀನಾ ಮತ್ತು ಭಾರತದ ಯುದ್ಧ ಸಮಯದಲ್ಲಿ ರಕ್ಷಣಾ ಸಚಿವರಾಗಿದ್ದಾಗ ಅವರು ತೆಗೆದುಕೊಂಡ ನಿಲುವುಗಳು ಭಾರತದ ಗೆಲುವಿಗೆ ಕಾರಣವಾದವು. ಹಾಗೆಯೇ, ಹಿಂದುಳಿದ ವರ್ಗದ ಅಭಿವೃದ್ಧಿಗೆ ಅವರು ಹಾಕಿ ಕೊಟ್ಟಿರುವ ಮಾರ್ಗವೇ ಎಲ್ಲಾ ಸರ್ಕಾರಗಳಿಗೆ ನೆರವಾಗಿದೆ ಎಂದರು.

ದೇಶ ಕಂಡ ಅಪ್ರತಿಮ ನಾಯಕ, ಹಸಿರುಕ್ರಾಂತಿಯ ಹರಿಕಾರ, ಸ್ವಾತಂತ್ರ್ಯ ಸೇನಾನಿಯಾಗಿದ್ದ ಅವರು ಪ್ರಧಾನಮಂತ್ರಿಯಾಗಲು ಸಾಧ್ಯವಾಗಲಿಲ್ಲವೆಂಬ ಕೊರಗು ಇದ್ದರೂ, ಅವರು ತಮಗೆ ಲಭಿಸಿದ ಹುದ್ದೆಗಳ ಮೂಲಕವೇ ಶೋಷಿತ ವರ್ಗದ ಏಳಿಗೆಗಾಗಿ ಶ್ರಮಿಸಿದವರು ಡಾ: ಬಾಬು ಜಗಜೀವನರಾಂ ಎಂದು ಸಮಾಜ ಕಲ್ಯಾಣ ಸಚಿವರು ಇದೇ ಸಂದರ್ಭದಲ್ಲಿ ಸ್ಮರಿಸಿದರು.

ಬಾಬು ಜಗಜೀವನರಾಂ ಅವರ ಹೆಸರಿನಲ್ಲಿ ಪ್ರಶಸ್ತಿ :-

ಡಾ: ಬಾಬು ಜಗಜೀವನರಾಂ ಅವರ ಆದರ್ಶಗಳನ್ನು ಪಾಲಿಸಿಕೊಂಡು ಹಿಂದುಳಿದ ವರ್ಗದವರ ಸೇವೆಯಲ್ಲಿ ತೊಡಗಿರುವ ಸಾಧಕರಿಗೊಬ್ಬರಿಗೆ ಪ್ರಶಸ್ತಿಯನ್ನು ನೀಡುವ ಸಲುವಾಗಿ ಸಾಹಿತಿ ಡಾ: ಕೆ. ಮರಳಸಿದ್ದಪ್ಪ ಅವರ ನೇತೃತ್ವದಲ್ಲಿ ರಚಿಸಲಾಗಿದ್ದ ಸಮಿತಿಯು ನಾಳೆ ಪ್ರಶಸ್ತಿ ವಿಜೇತರ ಹೆಸರನ್ನು ಸರ್ಕಾರಕ್ಕೆ ಸಲ್ಲಿಸಲಿದ್ದು, ನಾಳೆ ಪ್ರಶಸ್ತಿ ವಿಜೇತರ ಹೆಸರನ್ನು ಪ್ರಕಟಿಸಲಾಗುವುದು. ಹಾಗೆಯೇ, ಪ್ರಶಸ್ತಿಯು 5.00 ಲಕ್ಷ ರೂ. ಮೊತ್ತವನ್ನು ಒಳಗೊಂಡಿದೆ ಎಂದು ಸಚಿವರು ಹೇಳಿದರು.

ಅವರ ಜನ್ಮದಿನದ ಅಂಗವಾಗಿ ಇಂದು ಬೆಳಿಗ್ಗೆ 10–00 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಏರ್ಪಡಿಸಲಾಗಿದ್ದ ಸಾರ್ವಜನಿಕ ಸಮಾರಂಭವನ್ನು ಮೇ 08 ರಂದು ಸಂಜೆ 5–00 ಗಂಟೆಗೆ ನಡೆಸಲು ತೀರ್ಮಾನಿಸಲಾಗಿದೆ ಎಂದು ಸಚಿವರಾದ ಹೆಚ್. ಆಂಜನೇಯ ಅವರು ತಿಳಿಸಿದರು.

**ಇದೇ ಸಂದರ್ಭದಲ್ಲಿ ಶಾಸಕ ಗೋವಿಂದ ಕಾರಜೋಳ, ರಾಜ್ಯ ಹಿಂದುಳಿದ ಆಯೋಗದ ಅಧ್ಯಕ್ಷ ಕಾಂತರಾಜು, ಲಿಡ್ಕರ್‌ನ ಅಧ್ಯಕ್ಷ ರಾಮಕೃಷ್ಣ ಹಾಗೂ ಎಸ್.ಸಿ/ಎಸ್.ಟಿ. ಆಯೋಗದ ಬಸಣ್ಣ ಚಲವಾದಿ ಸೇರಿದಂತೆ ಸಮಾಜ ಕಲ್ಯಾಣ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.**

ಪುಟ್ಟಸ್ವಾಮಿ:ಪೂರ್ಣಿಮ:ಎಸ್‌ಬಿ.

## ತಿಂಗಳ ಚಿತ್ರ

**ಬೆಂಗಳೂರು, ಏಪ್ರಿಲ್ 5 (ಕರ್ನಾಟಕ ವಾರ್ತೆ)**

**ಕರ್ನಾಟಕ ಲಲಿತಕಲಾ ಅಕಾಡೆಮಿಯು ಮೇ 06 ರಂದು ಸಂಜೆ 5–30 ಕ್ಕೆ ಕನ್ನಡ ಭವನದ ವರ್ಣ ಕಲಾಗ್ಯಾಲರಿಯಲ್ಲಿ ತಿಂಗಳ ಚಿತ್ರ ಯೋಜನೆಯಡಿ ನಿರಂಜನಮೂರ್ತಿ, ಶರಣಪ್ಪ.ಎನ್.ಮುದ್ದಗೋಳ, ಪ್ರವೀಣ್‌ಕುಮಾರ್.ಎಸ್.ಅಂಗಡಿ ಮತ್ತು ಕೆ.ಎ.ಬಡಿಗೇರ ಅವರ ಕಲಾಕೃತಿಗಳ ಪ್ರದರ್ಶನವನ್ನು ಏರ್ಪಡಿಸಿದೆ.**

**ಈ ತಿಂಗಳ ಚಿತ್ರ ಪ್ರದರ್ಶನವನ್ನು ರಾಷ್ಟ್ರೀಯ ಸಂತಕವಿ ಕನಕದಾಸ ಅಧ್ಯಯನ ಮತ್ತು ಸಂಶೋಧನಾ ಕೇಂದ್ರದ ಸಮನ್ವಯಾಧಿಕಾರಿ ಕಾ.ತ. ಚಿಕ್ಕಣ್ಣ ಉದ್ಘಾಟಿಸುವರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷ ಡಾ: ಎಂ.ಎಸ್.ಮೂರ್ತಿ ಅಧ್ಯಕ್ಷತೆ ವಹಿಸುವರು.**

**ಪ್ರದರ್ಶನವನ್ನು ಏಪ್ರಿಲ್ 06 ರಿಂದ 10 ರವರೆಗೆ ಬೆಳಿಗ್ಗೆ 11–00 ರಿಂದ ಸಂಜೆ 6–00 ಗಂಟೆಯವರೆಗೆ ಸಾರ್ವಜನಿಕರ ವೀಕ್ಷಣೆಗೆ ಅವಕಾಶ ಕಲ್ಪಿಸಿಕೊಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.**

ಪುಟ್ಟಸ್ವಾಮಿ:ಪೂರ್ಣಿಮ:ಎಸ್‌ಬಿ.

*************